ದಿನಾಂಕ : 15.06.2022 ಓ.ಎಸ್ ನಂ.213/2018 ರಲ್ಲಿ
ಪಿ.ಡಬ್ಲ್ಯೂ-1(ಪ್ರಕಾಶ್.ವಿ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ಶ್ರೀ ಸಿ.ಸಿ.ಕೆ ವಕೀಲರಿಂದಃ

ದಿನಾಂಕ 31.10.2015 ರ ಕ್ರಯದ ಕರಾರು ಪತ್ರವನ್ನು ನಿಪಿ-2, ಸದರಿ ದಾಖಲೆಯಲ್ಲಿ ತನ್ನ ತಂದೆಯ ಸಹಿಗಳು ಇರುವುದಾಗಿ ಸಾಕ್ಷಿಯು ಸದರಿ ದಾಖಲೆಯ ಪ್ರತಿ ಪುಟದಲ್ಲಿನ ವೀರಣ್ಣ ಎಂಬ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ಕ್ರಮವಾಗಿ ನಿಪಿ-2(ಎ) ಯಿಂದ ನಿಪಿ-2(ಡಿ), 1 ಮತ್ತು 2 ನೇ ಪ್ರತಿವಾದಿಗಳ ಸಹಿಗಳು ಎಂದು ಸದರಿ ದಾಖಲೆಯಲ್ಲಿನ ಪ್ರತಿ ಪುಟದಲ್ಲಿ ಸಾಕ್ಷಿಯು ನೋಡಿ ಗುರುತಿಸಿದ ಸಹಿಗಳನ್ನು ಕ್ರಮವಾಗಿ ನಿಪಿ-2(ಇ) ಯಿಂದ ನಿಪಿ-2(ಹೆಚ್) ಹಾಗೂ ನಿಪಿ-2(ಐ) ಯಿಂದ ನಿಪಿ-2(ಎಲ್) , ಸದರಿ ದಾಖಲೆಯಲ್ಲಿ ಸಾಕ್ಷಿದಾರರ ಸಹಿಗಳೆಂದು ದಾಖಲೆಯ ಕೊನೆಯ ಪುಟದಲ್ಲಿನ 2 ಸಹಿಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2(ಎಂ) ಮತ್ತು ನಿಪಿ-2(ಎನ್) ಹಾಗೂ ಬಿಕ್ಲಂದಾರರ ಸಹಿ ಎಂದು ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ-2(ಒ) ಎಂದು, ದಿನಾಂಕ 12.12.2016 ರ ಕ್ರಯದ ಮುಂಗಡ ಕರಾರು ಪತ್ರವನ್ನು ನಿಪಿ-3, ಸದರಿ ದಾಖಲೆಯಲ್ಲಿ ತನ್ನ ತಂದೆಯ ಸಹಿಗಳು ಇರುವುದಾಗಿ ಸಾಕ್ಷಿಯು ಸದರಿ ದಾಖಲೆಯ ಪ್ರತಿ ಪುಟದಲ್ಲಿನ ವೀರಣ್ಣ ಎಂಬ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ಕ್ರಮವಾಗಿ ನಿಪಿ-3(ಎ) ಯಿಂದ ನಿಪಿ-3(ಡಿ), ಸದರಿ ದಾಖಲೆಯಲ್ಲಿ 1 ನೇ ಪ್ರತಿವಾದಿಯ ಸಹಿಗಳೆಂದು ಸಾಕ್ಷಿಯು ಸದರಿ ದಾಖಲೆಯಲ್ಲಿನ ಪ್ರತಿ ಪುಟದಲ್ಲಿನ ಸಹಿಗಳನ್ನು ಕ್ರಮವಾಗಿ ನಿಪಿ-3(ಇ) ಯಿಂದ ನಿಪಿ-3(ಜಿ) ಎಂದು, ಹಾಗೂ 2 ನೇ ಪ್ರತಿವಾದಿಯ ಸಹಿ ಎಂದು 3 ನೇ ಪುಟದಲ್ಲಿನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ-

ದಿನಾಂಕ ಃ 15.06.2022 ಓ.ಎಸ್ ನಂ.213/2018 ರಲ್ಲಿ
ಪಿ.ಡಬ್ಲ್ಯೂ-1(ಪ್ರಕಾಶ್.ವಿ)

3(ಹೆಚ್) ಎಂದು, ಸದರಿ ದಾಖಲೆಯಲ್ಲಿ ಸಾಕ್ಷಿದಾರರ ಸಹಿಗಳೆಂದು ದಾಖಲೆಯ ಕೊನೆಯ ಪುಟದಲ್ಲಿನ 2 ಸಹಿಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-3(ಐ) ಮತ್ತು ನಿಪಿ-3(ಜೆ), ನಮ್ಮ ವಕೀಲರ ಮೂಲಕ ಪ್ರತಿವಾದಿಗಳಿಗೆ ನೀಡಲಾದ ನೋಟಿಸ್‌ನ ಕಛೇರಿ ಪ್ರತಿಯನ್ನು ನಿಪಿ-4, ಸದರಿ ನೋಟಿಸ್‌ಗೆ ಸಂಬಂಧಿಸಿದ 2 ಅಂಚೆ ರಶೀದಿಗಳನ್ನು ಕ್ರಮವಾಗಿ ನಿಪಿ-5 ಮತ್ತು ನಿಪಿ-6, ಆರ್.ಪಿ.ಎ.ಡಿ ಮೂಲಕ 2ನೇ ಪ್ರತಿವಾದಿಗೆ ನೀಡಲಾದ ನೋಟಿಸ್ ವಾಪಸ್ಸಾಗಿದ್ದು ಅಂಚೆ ಲಕೋಟೆಯನ್ನು ತೆರೆದು ನೋಡಲಾಗಿ ಅದರಲ್ಲಿನ ನೋಟಿಸನ್ನು ನಿಪಿ-7, ಅಂಚೆ ಲಕೋಟೆಯನ್ನು ನಿಪಿ-8, ಅಂಚೆ ರಶೀದಿಯನ್ನು ನಿಪಿ-9, ಅಂಚೆ ಸ್ವೀಕೃತಿ ಪತ್ರವನ್ನು ನಿಪಿ-10, 1ನೇ ಪ್ರತಿವಾದಿ ನೀಡಿರುವ ಪ್ರತ್ಯುತ್ತರವನ್ನು ನಿಪಿ-11, ಅದಕ್ಕೆ ಸಂಬಂಧಿಸಿದ ಅಂಚೆ ಲಕೋಟೆಯನ್ನು ನಿಪಿ-12, ಅಂಚೆ ರಶೀದಿಯನ್ನು ನಿಪಿ-13, ಋಣಭಾರ ಪ್ರಮಾಣಪತ್ರವನ್ನು ನಿಪಿ-14 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.